**ದಿನಾಂಕಃ 20.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀಸವಾಲುಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ ಶ್ರೀ ಎ ಟಿ ಎಸ್ ವಕೀಲರ ಪರವಾಗಿಃ**

ವಾದಿ ಈ ದಾವೆಯನ್ನು ಏಕೆ ಸಲ್ಲಿಸಿದ್ದಾರೆ ಎಂಬ ಬಗ್ಗೆ ನನಗೆ ತಿಳಿದಿದೆ. ಎಷ್ಟು ಲಾಟ್ ಆಸ್ತಿಗಳಿಗೆ ವಾದಿಯರು ದಾವೆ ಸಲ್ಲಿಸಿದ್ದಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಯಾವ ಯಾವ ಸರ್ವೆ ನಂಬರುಗಳಿಗೆ ದಾವೆ ಸಲ್ಲಿಸಲಾಗಿದೆ ಎಂದು ಹೇಳಲಾಗುವುದೇ ಎಂದರೆ ಸಾಕ್ಷಿ ಬಹಳಷ್ಟು ಸರ್ವೆ ನಂಬರುಗಳಿವೆ, ಯಾವುದು ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳ ಚೆಕ್ಕುಬಂಧಿ ಹೇಳಲಾಗುವುದೇ ಎಂದರೆ ಸಾಕ್ಷಿ ಸರ್ವೆ ನಂಬರುಗಳನ್ನು ಹೇಳಿದರೆ ಚೆಕ್ಕುಬಂಧಿ ಹೇಳಲು ಪ್ರಯತ್ನಿಸುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸುಳ್ಳು. ದಾವಾ ಆಸ್ತಿಗಳು, ನೀವು ಹೇಳಿಕೊಳ್ಳುವ ರೀತಿ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ನೀವು ಹಾಜರುಪಡಿಸಿದ್ದೇನೆ ಎಂದು ಹೇಳುವ ದಾಖಲೆಗಳು ಯಾವುವು ಎಂದರೆ ಸಾಕ್ಷಿ ಪಹಣಿಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಾನು ಸ್ವಯಾರ್ಜಿತವೆಂದು ಹೇಳಿಕೊಳ್ಳುವ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳ ಉತ್ಪತ್ತಿಯಿಂದ ಖರೀದಿಸಿದ ಆಸ್ತಿಗಳಾಗಿರುತ್ತವೆ, ಆದ ಕಾರಣ ಅದು ಒಟ್ಟು ಕುಟುಂಬದ ಆಸ್ತಿಗಳು ನನಗೆ ಯಾವುದೇ ಹಕ್ಕು ಇಲ್ಲ, ಅದು ನನ್ನ ಸ್ವಯಾರ್ಜಿತ ಆಸ್ತಿಯಲ್ಲ ಅಂದರೆ ಸರಿಯಲ್ಲ.

(ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ